# ಸಿಂಧೂರ ಎಷ್ಟು ಸುರಕ್ಷಿತ?



ಹಣೆಗೆ ಸಿಂಧೂರ ಭೂಷಣ. ಆದರೆ ಇಂದು ಮಾರುಕಟ್ಟೆಯಲ್ಲಿ ಸಿಗುವ ಕುಂಕುಮಗಳಲ್ಲಿ ವಿಷಕಾರಕ ಅಂಶಗಳಿರುವುದರಿಂದ ಆರೋಗ್ಯ ಸಮಸ್ಯೆ ಕಾಡಬಹುದು. ಸೌಂದರ್ಯಪಾಲನೆಗಾಗಿ ಬಳಸುವ ಬಿಂದಿ ಅನಾರೋಗ್ಯಕ್ಕೆ ಕಾರಣವಾಗಬಹುದು. ಮುನ್ನೆಚ್ಚರಿಕೆ ವಹಿಸುವುದು ಬಹಳ ಮುಖ್ಯ.

■ ರಾಜೇಶ್ವರಿ ಜಯಕೃಷ್ಣ

ಹಣೆಗೆ ಕುಂಕುಮ ಭೂಷಣ. ತಿಲಕ, ಬಿಂದಿ, ಕುಂಕುಮ ಎಂದೆಲ್ಲ ಕರೆಯುವ ಸಿಂಧೂರ ಇಡದ ಹೆಣ್ಣಿನ ಮುಖ ನೋಡಲು ಲಕ್ಷಣವಾಗಿರುವುದಿಲ್ಲ. ಇದು ಸಂಪ್ರದಾಯದ ಪ್ರತೀಕವೂ ಹೌದು. ಇಂದು ಇಲ್ಲಿಯೂ ಫ್ಯಾಷನ್ ತಲೆಹಾಕಿದೆ. ವರ್ಣರಂಜಿತ ಫ್ಯಾಷನೆಬಲ್ ಬಿಂದಿಗಳು ಮಾರುಕಟ್ಟೆಗೆ ಬಂದಿವೆ. ಇದು ಸಂಪ್ರದಾಯಕ್ಕೂ ಸೈ, ಫ್ಯಾಷನ್‌ಗೂ ಸರಿ ಎನ್ನುವಂತಿದೆ.

## ಕುಂಕುಮ ಹಾನಿಕಾರಕವೇ?

ಭಾರತೀಯ ಸ್ತ್ರೀಯರಿಗೆ ಅತ್ಯಂತ ಆಪ್ತವಾಗಿರುವ ಕುಂಕುಮವು ನಮ್ಮ ಸಂಸ್ಕೃತಿಯಲ್ಲಿ ಹಾಸುಹೊಕ್ಕಾಗಿ ಬೆರೆತಿದೆ. ಅದರ ಬಗೆಗೆ ಅದೆಷ್ಟು ಹಾಡುಗಳು ಬಂದಿದೆಯೋ! ಹಬ್ಬಹರಿದಿನಗಳಲ್ಲಂತೂ 'ಅರಿಶಿನ ಕುಂಕುಮ ಇಟ್ಕೊಳ್ಳೋಕೆ ಬನ್ನಿ' ಅಂತ ಕರೆಯೋದು ವಾಡಿಕೆ. ಇತರ ಅನೇಕ ಉತ್ಪನ್ನಗಳಂತೆ ಕುಂಕುಮ ಕೂಡಾ ಆರೋಗ್ಯಕ್ಕೆ ಹಾನಿಕರ ಎನ್ನುತ್ತಿದ್ದಾರೆ ಅಮೆರಿಕದ ವಿಜ್ಞಾನಿಗಳು. ಕುಂಕುಮದ ಹಲವು ಮಾದರಿಗಳನ್ನು ಸಂಗ್ರಹಿಸಿ ಪರಿಶೀಲಿಸಿದಾಗ ಅವುಗಳಲ್ಲಿ ಮಿತಿಗಿಂತ ಹೆಚ್ಚಿನ ಪ್ರಮಾಣದಲ್ಲಿ ಸೀಸದ ಅಂಶವಿರುವುದು ಪತ್ತೆಯಾಗಿದೆಯಂತೆ!

ಮಾರುಕಟ್ಟೆಗಳಲ್ಲಿ ಲಭ್ಯವಾಗುವ ಕುಂಕುಮ ಮತ್ತು ಕಾಡಿಗೆಗಳಲ್ಲಿ ಸೀಸ ಮತ್ತು ಇತರ ಅಪಾಯಕಾರಿ ಲೋಹದ ಅಂಶಗಳಿರುತ್ತವೆ. ಇವುಗಳಿಂದ ಮೂತ್ರಕೋಶ, ಯಕೃತ್, ಚರ್ಮದ ಕಾಯಿಲೆಗಳುಂಟಾಗುತ್ತವೆ. ಬೌದ್ಧಿಕ ಮಟ್ಟ ಕುಂಠಿತಗೊಳ್ಳುತ್ತದೆ. ಮಗು ಹುಟ್ಟುವಲ್ಲಿ ವಿಳಂಬವಾಗುತ್ತದೆ. ಚರ್ಮದಲ್ಲಿ ಹುಣ್ಣು, ಉಗುರು ಮತ್ತು ಹಲ್ಲುಗಳಲ್ಲಿಯೂ ತೊಂದರೆ ಕಾಣಿಸಿಕೊಳ್ಳಬಹುದು. ಕೆಲವರಿಗೆ ಅಲರ್ಜಿಯೂ ಉಂಟಾಗಬಹುದು ಎನ್ನುವುದು ಭಾರತೀಯ ಮೂಲದ ಅಮೆರಿಕನ್ ವೈದ್ಯರ ಅಭಿಪ್ರಾಯ.

ನಿಜ. ಹಿಂದಿನ ಕಾಲದಲ್ಲಿ ಸ್ತ್ರೀಯರು ಕಾಸಿನಗಲ ಕುಂಕುಮ ಇಟ್ಟುಕೊಳ್ಳುತ್ತಿದ್ದರು. ಸಂಪ್ರದಾಯದಂತೆ ಬೈತಲೆಯುದ್ದಕ್ಕೂ ಅದನ್ನು ತೀಡಿಕೊಳ್ಳುತ್ತಿದ್ದರು. ಆದರೆ ಅಂದಿನ ಕುಂಕುಮವು ಮನೆಯಲ್ಲಿಯೇ ತಯಾರಾಗುತ್ತಿತ್ತು. ಅರಿಶಿನ, ಸ್ಫಟಿಕ, ಕ್ಯಾಲ್ಸಿಯಂ ಸಾಲ್ಟ್, ಕರ್ಪೂರ, ಕೇಸರಿ, ಶ್ರೀಗಂಧ ಮತ್ತು ಬೀಟ್ರೂಟ್‌ಗಳಿಂದ ತೆಗೆದ ಸಾರ ಮುಂತಾದವನ್ನು ಮಿಶ್ರ ಮಾಡಿ ಅದನ್ನು ತಯಾರಿಸಲಾಗುತ್ತಿತ್ತು. ಆದರೆ ಇಂದು ಬಳಸುವ ಕುಂಕುಮವು ಕೇವಲ ರಾಸಾಯನಿಕಗಳ ಮಿಶ್ರಣವಾಗಿಬಿಟ್ಟಿದೆ. ಅಗ್ಗದ ದರದಲ್ಲಿ, ಕಳಪೆ ಗುಣಮಟ್ಟದ ರಂಗನ್ನು ಸೇರಿಸಿ ಮಾಡುವ ಕಡುಕೆಂಪು ಬಣ್ಣದ ಕುಂಕುಮವು ನೋಡಲು ಅತ್ಯಾಕರ್ಷಕವಾಗಿದ್ದು ಸ್ತ್ರೀಯರ ಮನಸೆಳೆಯುತ್ತದೆ. ಆದರೆ ಅದರಲ್ಲಿರುವುದು ಕೆಂಪು ಕಿತ್ತಳೆ ಬಣ್ಣದ ವರ್ಮಿಲಿಯನ್ ಎಂಬ ಅಂಶ. ಅದು ಸಿಂಧೂರ ವರ್ಣದ ಪುಡಿರೂಪ. ಅಷ್ಟೇ ಅಲ್ಲ, ಸೀಸ ಮತ್ತು ಕೃತಕ ರಾಸಾಯನಿಕ ವಸ್ತುಗಳನ್ನು ಬೆರೆಸಿ ಮಾಡಿದ ರಂಗೂ ಅದರಲ್ಲಿರುತ್ತದೆ. ಪುಡಿ ಮಾಡಿದ ಕಚ್ಚಾ ಕೆಂಪು ಸೀಸ, ರೊಡಾಮಿನ್ ಬಿ ಡೈ ಮತ್ತು ಮರ್ಕ್ಯುರಿಕ್ ಸಲ್ಫೇಟ್ ಕೂಡಾ ಅಡಕವಾಗಿರುತ್ತದೆ.

ಇಂಥ ಕಳಪೆ ಕುಂಕುಮವನ್ನು ಬಳಸುವುದರಿಂದ ಚರ್ಮ ಉರಿ. ತುರಿಕೆ, ಕೂದಲು ಉದುರುವಿಕೆ, ತಲೆಹೊಟ್ಟು ಮುಂತಾದ ಸಮಸ್ಯೆಗಳು ಕಾಣಿಸಿಕೊಳ್ಳುತ್ತವೆ. ಮರ್ಕ್ಯುರಿಕ್ ಸಲ್ಫೇಟ್‌ನಿಂದ ಚರ್ಮದ ಕ್ಯಾನ್ಸರ್, ರೊಡಾಮಿನ್ ಬಿ ಡೈಯಿಂದ ವಂಶ ಪಾರಂಪರಿಕ ಕಾಯಿಲೆಗಳು ಕಾಣಿಸಿಕೊಳ್ಳುತ್ತವೆ. ಏನೋ ಅಜಾಗರೂಕತೆಯಿಂದ ಕುಂಕುಮವು ಬಾಯಿಗೆ ಹೋದಲ್ಲಿ ವಿಷವಾಗಿಯೂ ಪರಿಣಮಿಸಬಲ್ಲುದು. ಕುಂಕುಮವನ್ನು ಅಕಸ್ಮಾತ್ತಾಗಿ ಮೂಗಿನೊಳಗೆ ಎಳೆದುಕೊಂಡಲ್ಲಿ ಅಥವಾ ತಿಂದು ಹೋದಲ್ಲಿ ಸಂತಾನೋತ್ಪತ್ತಿಯಲ್ಲೂ ತೊಂದರೆಯಾಗಬಲ್ಲುದು. ಕುಂಕುಮದಿಂದ ಮೆದುಳು, ಮೂತ್ರಕೋಶ ಮತ್ತು ಕಣ್ಣಿಗೂ ಹಾನಿ ಉಂಟಾಗಬಹುದು ಎನ್ನುತ್ತಾರೆ ತಜ್ಞರು.

## ಎಚ್ಚರ ವಹಿಸುವುದು ಹೇಗೆ?

ಕುಂಕುಮವು ಚರ್ಮಕ್ಕೆ, ದೇಹಕ್ಕೆ ಹಾನಿಕಾರಕವಾಗದಂತೆ ನಾವು ಹೇಗೆ ಎಚ್ಚರವಹಿಸಬಹುದು? ಆರೋಗ್ಯ ಹೇಗೆ ಕಾಪಾಡಿಕೊಳ್ಳಬಹುದು? ಈ ಬಗ್ಗೆ ಜಿಜ್ಞಾಸೆ ಅಗ್ರ್ತಯ.

* ಮಾರುಕಟ್ಟೆಯಲ್ಲಿ ಸಿಗುವ ಅಗ್ಗದ ಕಡು ಬಣ್ಣದ ಅತ್ಯಾಕರ್ಷಕ ಕುಂಕುಮವನ್ನು ಬಳಸದಿರಿ.